ಅನುಬಂಧ ಅ

ಕಳೆದ ಎರಡು ವರ್ಷಗಳಲ್ಲಿ ಅಂದರೆ 1-4-2001 ರಿಂದ 31-3-2003ರ ವರೆಗಿನ ವಸತಿ ಯೋಜನೆಗಳ ಪ್ರಗತಿ

ಯೋಜನೆ		ಗುರಿ (31-3-2003) ರಲ್ಲಿ ಇದ್ದಂತೆ	ಸಾಧನೆ ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರು ಮನೆಗಳು (31-3-2003) ರಲ್ಲಿ ಇದ್ದಂತೆ
ಗ್ರಾಮೀಣ ಆಶ್ರಯ	2001-02 ಮತ್ತು	251922	202587	45337
	2002-03			
	ಬ್ಯಾಕಲಾಗ		47244	14343
ನವಗ್ರಾಮ	2001-02	78203	2322	14763
	2002-03			
	ಬ್ಯಾಕಲಾಗ	0	0	0
ನಗರ ಆಶ್ರಯ	2001-02 ರಿಂದ			
	2002-03	68240	46768	13130
	ಬ್ಯಾಕಲಾಗ			
ಗ್ರಾಮೀಣ	2001-02 ರಿಂದ			
ಅಂಬೇಡ್ಕರ	2002-03	46212	32094	10950
	ಬ್ಯಾಕಲಾಗ		12810	2849
ನಗರ ಅಂಬೇಡ್ಕರ	2000-01 ರಿಂದ			
	2002-03			
	ಬ್ಯಾಕಲಾಗ		4785	1458
ಒಟ್ಟು		**444577**	**356136**	**107139**

ಹೊಸಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

2878 (3607) ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ, ಶುಶ್ರೂಷಕಿ ಮತ್ತು ಇತರ ಕಛೇರಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ತುಂಬಲು ಏನು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಈ ಆಸ್ಪತ್ರೆ ಶುಚಿತ್ವ ಹೊಣೆಗಾರಿಕೆಯನ್ನು ಖಾಸಗಿಯವರಿಗೆ ವಹಿಸಲಾಗಿದೆಯೇ;

ಈ) ಔಷಧಿಗ ನ್ನು ನೀಗಿಸಲು ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮಗಳೇನು?

ಉ) ಈ ಹೈಟೆಕ್ ಆಸ್ಪತ್ರೆಯಲ್ಲಿ ಪ್ರಯೋಗಾಲಯ ರಕ್ತನಿಧಿ ಕೇಂದ್ರ ಮತ್ತು ತಂತ್ರಜ್ಞಾನ ಪ್ರಯೋಗಾಲಯ ಅಳವಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ಈ ಆಸ್ಪತ್ರೆಯಲ್ಲಿ ಒ.ಟಿ. (ಶಸ್ತ್ರ ಚಿಕಿತ್ಸೆ) ಕಾರ್ಯ ನಿರ್ವಹಿಸುತ್ತಿರಲು ಕಾರಣಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರ ಶುಶ್ರೂಷಕಿ ಮತ್ತು ಇತರೆ ಕಛೇರಿ ಸಿಬ್ಬಂದಿಗಳ ಕೊರತೆಯಿರುವುದಿಲ್ಲ. ಎಲ್ಲಾ ಹುದ್ದೆಗಳು ಭರ್ತಿಯಾಗಿರುತ್ತದೆ.

ಆ) ಅನ್ವಯಿಸುವುದಿಲ್ಲ

ಇ) ಮೆ: ಶಿವಶಕ್ತಿ ಎಂಟರ್‌ಪ್ರೈಸಸ್ ಲೇಬರ್ ಮತ್ತು ಹೌಸಿಂಗ್ ಕ್ರೆನಿಂಗ ಕಾಂಟ್ರಾಕ್ಟರ್ಸ್ ವಿಜಯಪುರ, ಇವರಿಗೆ ಹೊಣೆಗಾರಿಕೆಯನ್ನು ವಹಿಸಲಾಗಿದೆ.

ಈ) ಔಷಧಿಗಳು 2002–03ನೇ ಸಾಲಿನಲ್ಲಿ ಶೇಕಡ 40 ರಷ್ಟು ಸರ್ಕಾರಿ ಔಷಧಿ ಮಳಿಗೆಯಿಂದ ಸದರಿ ಆಸ್ಪತ್ರೆಗೆ ಸರಬರಾಜು ಮಾಡಿರುತ್ತಾರೆ. ಶೇ. 60ರಷ್ಟು ಔಷಧ ಮತ್ತು ರಾಸಾಯನಿಕಗಳನ್ನು ಇನ್ನು ಒದಗಿಸಬೇಕಾಗಿದೆ.

ಉ) ರಕ್ತನಿಧಿ ಕೇಂದ್ರ ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ. ಪ್ರಯೋಗಶಾಲಾ ಸೇವೆ ಲಭ್ಯವಿದೆ.

ಊ) ಅರವಲಿಕೆ ತಜ್ಞರ ಹುದ್ದೆಯು ಮಂಜೂರಾಗಿರುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ, ಸೇಡಂ ಕ್ಷೇತ್ರದ ಕುಡಿಯುವ ನೀರಿನ ಮೋಟಾರುಗಳನ್ನು ದುರಸ್ತಿಗೊಳಿಸುವ ಬಗ್ಗೆ

2879 (2897) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ, ಸೇಡಂ ಕ್ಷೇತ್ರದಲ್ಲಿ ಕುಡಿಯುವ ನೀರಿನ ಮೋಟಾರುಗಳು ಸುಟ್ಟುಹೋದರೆ ಹಳೆಯ ಮೋಟಾರುಗಳನ್ನು ದುರಸ್ತೆ ಮಾಡಿ ಹೊಸ ಮೋಟಾರುಗಳೆಂದು ತೋರಿಸುವುದು ನಿಜವಲ್ಲವೇ;

ಆ) ಒಂದು ವೇಳೆ ಹೊಸ ಮೋಟಾರುಗಳನ್ನು ದುರಸ್ತೆ ಮಾಡಿಸಿ ಹಳೆಯ ಮೋಟಾರುಗಳನ್ನು ತಮ್ಮ ಕಾರ್ಯಾಲಯದಲ್ಲಿ ಶೇಖರಿಸಲಾಗಿದೆಯೇ; ಅವುಗಳ ಸಂಖ್ಯೆ ಎಷ್ಟು;

ಇ) ಒಂದು ವೇಳೆ ಮೋಟಾರುಗಳನ್ನು ದುರಸ್ತಿ ಮಾಡಿಸಿ ಹಳೆಯ ಮೋಟಾರುಗಳೆಂದು ಜೋಡಿಸಿದರೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು): ಅ) ಇಲ್ಲಾ

ಆ) ಹೌದು. ಹಳೆಯ ಮೋಟಾರುಗಳನ್ನು ದಾಸ್ತಾನಿನಲ್ಲಿರಿಸಲಾಗಿದೆ.

ಇ) ಇಂತಹ ಪ್ರಕರಣಗಳು ಸೇಡಂ ತಾಲ್ಲೂಕಿನ ಯಾವುದೇ ಗ್ರಾಮ ಪಂಚಾಯತಿಗಳಲ್ಲಿ